ನಾನು. ನನ್ನಪ್ಪ ಅಜ್ಜನ ಕೊನೆಯ ಹೆಂಡತಿಯ ಮಕ್ಕಳಲ್ಲಿ ಒಬ್ಬರು. ನಾನು ಚಿಕ್ಕ ಹುಡುಗನಾಗಿದ್ದಾಗ ಅಜ್ಜನಿಗೂ ಅಜ್ಜನ ಮೊದಲಮಗನಿಗೂ ದೊಡ್ಡ ಕಲಹವಾಯಿತು. ಕೆಲವು ಮಕ್ಕಳು ಆ ಕಡೆ ಕೆಲವರು ಈ ಕಡೆ. ನನ್ನಪ್ಪ ಅಜ್ಜನ ಬೆನ್ನಿಗೆ ನಿಂತರು. ಕಲಹ ಅಂದರೆ ಬಾಯಿಮಾತಿನ ಘರ್ಷಣೆ ಏನಲ್ಲ, ಹೊಡೆದಾಟ... ರಕ್ತಸುರಿದ ಯುದ್ಧವೇ... ಮೂರು ಮಂದಿ ಸಾವಿಗೀಡಾದರು. ಕೆಲಸಕ್ಕಿದ್ದವರೆಲ್ಲ ಓಡಿಹೋದರು. ದೊಡ್ಡಪ್ಪನ ಕಡೆಯವರು ಸಿಕ್ಕಿದಷ್ಟು ಸಂಪತ್ತು ದೋಚಿದರು, ಒಂಟೆಗಳು, ಕುರಿಮಂದೆಗಳನ್ನು ಎಗರಿಸಿಕೊಂಡು ಹೋದರು. ಸಿಂಹಾಸನವನ್ನು ಆಕ್ರಮಿಸಲು ಬಂದವರನ್ನ ಅಜ್ಜ ಅದೇ ಸಿಂಹಾಸವನ್ನೆತ್ತಿ ಹೊಡೆದರು. ಸಿಂಹಾಸನದ ಕಾಲು ಮುರಿದುಬಿತ್ತು. ಆ ಮುದಿಕಾಲದಲ್ಲೂ ಅಜ್ಜ ತೋರಿಸಿದ ಕೆಚ್ಚು ನಾನು ಮರೆಯಲಾರೆ. ರಾಜ ಅಂದರೆ ಹಾಗೆ ಇರಬೇಕು.

ಆಮೇಲೆ ಪಾಶ್ಚಾತ್ಯರು ಪೆಟ್ರೋಲು ಹುಡುಕಿಕೊಂಡು ಬಂದರು. ಕಾಲ ಕೆಟ್ಟಿತು. ಜಗಳಕ್ಕೆ ಕೋವಿ ಬಂತು. ಎಲ್ಲೆಲ್ಲೂ ಬದಲಾವಣೆಗಳು. ಅಜ್ಜನ ಹಿಂದೆ ಬಂದವರಲ್ಲಿ ಕೆಲವರು ಪೆಟ್ರೋಲು ದೊರೆಗಳ ಹಿಂದೆ ಹೋಗಿ ನೌಕರಿ ಹಿಡಿದರು. ಅಲ್ಲಿಂದ ಅಜ್ಜನ ಸಾಮ್ರಾಜ್ಯ ಕುಸಿಯುತ್ತಾ ಹೋಯಿತು. ಆಮೇಲೆ ಆತ ಹೆಚ್ಚು ಕಾಲ ಬಾಳಲಿಲ್ಲ. ಮಜ್ಲೀಸಿನಲ್ಲೊಮ್ಮೆ ನನ್ನ ನಂತರ ಗದ್ದುಗೆಗೆ ನೀನು ಎಂದು ಅಪ್ಪನಲ್ಲಿ ಹೇಳಿದರಂತೆ. ಅಜ್ಜ ತೀರಿದ ಬಳಿಕ ಅಪ್ಪ ಸಿಂಹಾಸನ ನನ್ನದು ಎಂದು ಗಟ್ಟಿ ಕೂತುಬಿಟ್ಟ. ಕಾಸಿಗೆ ಪ್ರಯೋಜನವಿಲ್ಲದ ಗದ್ದುಗೆ ಯಾಕೆ, ಇರುವ ಸಂಪತ್ತನ್ನು ಹಂಚಿಕೊಂಡು ನಾವೂ ಉಳಿದವರಂತೆ ಪೆಟ್ರೋಲಿನ ಹಿಂದೆ ಸಾಗೋಣ ಎಂದು ಅಣ್ಣ ತಮ್ಮಂದಿರೆಲ್ಲ ಅಪ್ಪನಲ್ಲಿ ಜಗಳಕ್ಕೆ ನಿಂತರು. ಅವರೊಳಗೆ ಪುನಃ ಕಲಹವಾಯಿತು. ಈ ಬಾರಿ ಪುಣ್ಯಕ್ಕೆ ಹೊಡೆದಾಟವಾಗಲಿಲ್ಲ. ಅಪ್ಪ, 'ನೀವು ಹೋಗುವವರು ಹೋಗಿ, ನನ್ನ ನಂತರ ಇವನು ಪಟ್ಟಕ್ಕೇರಿ ಅರಸೊತ್ತಿಗೆ ಮಾಡುತ್ತಾನೆ' ಎಂದು ಗುಡುಗಿದರು. ಅಳಿದುಳಿದ ಸಂಪತ್ತಿನಲ್ಲೇ ಭವ್ಯವಾಗಿ ಅರಸೊತ್ತಿಗೆ ನಡೆಸಿದ್ದ ಅಪ್ಪ. ಇದ್ದ ಸಂಪತ್ತೆಲ್ಲ ಕರಗುತ್ತಿತ್ತು. ಅಪ್ಪ ತೀರಿಕೊಂಡಾಗ ಮನೆತನದ ಹೊಣೆ ನನ್ನ ಮೇಲೆ ಬಂತು. ಈ ಸಿಂಹಾಸನ ನನ್ನ ಸುಪರ್ದಿಗೆ ಬಂತು. ಅದರೊಂದಿಗೆ ಸಿಕ್ಕಿದ್ದು ಒಂದು ತಲವಾರು, ಮೂರು ಒಂಟೆ ಮತ್ತು ಹದಿನೈದು ಕುರಿ. ನನ್ನೊಡನೆ ನನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳು. ಜೀವನ ಕಷ್ಟವಾಗಿತ್ತು. ಪೆಟ್ರೋಲಿನ ಗಿಜಿಗಿಜಿಯಲ್ಲಿ ಬಗೆಬಗೆಯ ಹೊಸ ವ್ಯಾಪಾರಗಳು ಆರಂಭವಾಗಿದ್ದವು. ಅಕ್ಕಿ, ಹಿಟ್ಟು, ದಿನಸಿ, ಕುರಿಮಾಂಸ, ಬಟ್ಟೆ, ಅತ್ತರು ಹೀಗೆ ನಾನೂ ಸಣ್ಣ ಪುಟ್ಟ ವ್ಯಾಪಾರ ಮಾಡಿದೆ. ತಡವಾಗಿ ಆರಂಭಿಸಿದ್ದರಿಂದ ಮತ್ತು ಓದಲು, ಬರೆಯಲು ಗೊತ್ತಿಲ್ಲದೇ ಹೋದುದರಿಂದ ನನಗೆ ವ್ಯಾಪಾರ ಕೈಹಿಡಿಯಲಿಲ್ಲ. ಮಗಳಿಗೆ ಮದುವೆ ಮಾಡಿದೆ. ಸ್ವಲ್ಪ ಹಣ ಸಿಕ್ಕಿತು. ಒಂದು ವರ್ಷದ ಖರ್ಚು ಅದರಲ್ಲಿ ಹೋಯಿತು. ಹಣವಿಲ್ಲ ಎಂದು ಮನೆತನದ ಮರ್ಯಾದೆ ನಾನು ಬಿಟ್ಟುಕೊಟ್ಟಿರಲಿಲ್ಲ. ಹಬ್ಬದ ದಿನಗಳಲ್ಲಿ ಸುತ್ತುಮುತ್ತಲಿನ ಬಡಜನರಿಗೆ ದಿಲ್ದಾರಿಯಾಗಿ ಖರ್ಚು ಮಾಡುತ್ತಿದ್ದೆ. ಮಗ ಶಾಲೆ ಕಲಿಯುತ್ತಿದ್ದ. ಖರ್ಚು ಜಾಸ್ತಿಯಾಗಿ ಇದ್ದ ಒಂಟೆಗಳನ್ನೂ ಕುರಿಗಳನ್ನೂ ಮಾರಬೇಕಾಗಿ ಬಂತು. ಅಷ್ಟಾಗುವಾಗ ಶಾಲೆ ಮುಗಿಸಿದ ಮಗ ಅಲ್ಲೇ ಮಾಸ್ತರನಾಗಿ ಕೆಲಸಕ್ಕೆ ಸೇರಿದ. ಅದೇ ಸಮಯ ಕಾಯಿಲೆ ಬಂದು ಹೆಂಡತಿಯೂ ಹೋಗಿಬಿಟ್ಟಳು. ಮಗನಿಗೆ ಕೆಲಸ ಸಿಕ್ಕಿದಾಗ ಹಣಕಾಸು ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ಆಗ ಒಂದು ದಿನ ದೊಡ್ಡ ಮಜ್ಲೀಸ್ ಕೂಡಿ ಹಾಕಿದ್ದೆ. ನನ್ನ ನಂತರ ಈ ಗದ್ದುಗೆಯಲ್ಲಿ ನನ್ನ ಮಗ ವಿರಾಜಿಸುತ್ತಾನೆ ಎಂದು ಇವತ್ತು ಘೋಷಿಸುತ್ತೇನೆ, ನೀನೂ ಬಾ... ಎಂದು ಮಗನನ್ನು ಕರೆದೆ. ನನ್ನ ಖರ್ಚು ವೆಚ್ಚ ಸಹಿಸಲಾಗದೆ